ಹರಪನಹಳ್ಳಿ ತಾಲ್ಲೂಕಿನಲ್ಲಿ ಬೀಡಿ ಕಾರ್ಮಿಕರಿಗೆ ಉಚಿತ ವಸತಿ ಸೌಕರ್ಯ ಮತ್ತು ಕನಿಷ್ಠ ದಿನಗೂಲಿ ಕೊಡುವ ಬಗ್ಗೆ

ಶ್ರೀ. ಶ್ರೀ ಬಿ ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಸಮಾಜ ಕಲ್ಯಾಣ ಕಾರ್ಮಿಕ ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು.—ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಹರಪನಹಳ್ಳಿ ತಾಲ್ಲೂಕಿನಲ್ಲಿ ಸುಮಾರು ೧೫,೦೦೦ಕ್ಕೂ ಹೆಚ್ಚು ಬೀಡಿ ಕಾರ್ಮಿಕರು ಇರುವುದು ನಿಜವೆ ?

೨ ಅವರು ತುಂಬಾ ಹೀನಾಯಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೩ ಅವರಿಗಾಗಿ ಉಚಿತ ವಸತಿ ಸೌಕರ್ಯ ವ್ಯವಸ್ಥೆ ಮಾಡುವ ಬಗ್ಗೆ ಸರ್ಕಾರದವರಲ್ಲಿ ಯಾವ ದಾದರೂ ಯೋಜನೆ ಇದೆಯೇ ?

೪ ಬೀಡಿ ಕಾರ್ಮಿಕರಿಗೆ ಕನಿಷ್ಠ ದಿನಗೂಲಿ ದೊರೆಯುತ್ತಿದೆಯೆ : ಇಲ್ಲವಾದಲ್ಲಿ ಅವರಿಗೆ ಕನಿಷ್ಠ ದಿನಗೂಲಿ ದೊರಕಿಸಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಕಾರ್ಮಿಕ ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು)—

೧ ನಿಜವಲ್ಲ. ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ ಹರಪನಹಳ್ಳಿ ತಾಲ್ಲೂಕಿನಲ್ಲಿ ಸುಮಾರು ೩೦೦೦ ಬೀಡಿ ಕಾರ್ಮಿಕರಿದ್ದಾರೆ.

೨ ಇಲ್ಲ

೩ ಇಲ್ಲ

೪ ಹೌದು. ಈಗಾಗಲೇ ಕ್ರಮ ಕೈಗೊಂಡಿದೆ.

ಹರಪನ ಹಳ್ಳಿಯಲ್ಲಿ ಬಸ್ ಡಿಪೋ ಸ್ಥಾಪಿಸುವ ಬಗ್ಗೆ

೩೦೩. ಶ್ರೀ ಬಿ. ಎಚ್. ಯಂಕಾನಾಯ್ಕ (ಹರಪನಹಳ್ಳಿ).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಬಸ್ಸಿನ ಸೌಕರ್ಯದ ಅಭಾವ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಭಾಗದ ಜನರ ಬಹುಮುಖ್ಯ ಬೇಡಿಕೆಯಾದ ಬಸ್ ಡಿಪೋವನ್ನು ಸದರಿ ಹರಪನ ಹಳ್ಳಿಯಲ್ಲಿ ಸ್ಥಾಪಿಸಲು ಹಿಂದೂಪುರ ಶ್ರೀನಿವಾಸ್‌ರಾವ್ ಎಂಬುವವರು ಸರ್ಕಾರಕ್ಕೆ ಆರು ಎಕರೆ ಜಮೀನನ್ನು ಉಚಿತವಾಗಿ ಈಗಾಗಲೇ ನೀಡಿರುವುದು ಮತ್ತು ಈ ಭೂಮಿಯನ್ನು ಈಗಾಗಲೇ ವಶಕ್ಕೆ ತೆಗೆದುಕೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕೂಡಲೇ ಹರಪನಹಳ್ಳಿಯಲ್ಲಿ ಬಸ್ ಡೀಪೊ ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಕೆ. ಜೆ. ಜಾರ್ಜ್(ಆಹಾರ ಮತ್ತು ನಾಗರೀಕ ಮಂತ್ರಿಗಳು).—

ಅ) ಸಾಕಷ್ಟು ಬಸ್ಸುಗಳ ಸೌಕರ್ಯವನ್ನು ಹರಪನಹಳ್ಳಿಗೆ ಮಾಡಲಾಗಿದೆ.

ಆ) ಹೌದು.

ಇ) ಹಡಗಲಿಯಲ್ಲಿ ಡಿಪೋವನ್ನು ಉದ್ಘಾಟಿಸಿರುವುದರಿಂದ ಹರಪನಹಳ್ಳಿಯಲ್ಲಿ ಡಿಪೋವನ್ನು ಸ್ಥಾಪಿಸುವ ಅವಶ್ಯಕತೆ ಸದ್ಯಕ್ಕೆ ಇರುವುದಿಲ್ಲ.